ಇದೊಂದು ರೀತಿಯಲ್ಲಿ, 'ವಾಯಿಮೂಡು ಹೈದರಾಲಿ ವರುವಾನ್' ಎಂದು ತಮಿಳು ತಾಯಂದಿರು ತಮ್ಮ ಮಕ್ಕಳ ಅಳು ನಿಲ್ಲಿಸಲು ಹೆದರಿಸಿ ಹೇಳುತ್ತಿದ್ದ ರೀತಿಯಲ್ಲೇ ಇದೆ, ಅಲ್ಲವೆ? ಈಚೀಚೆಗೆ ಕೆಲವು ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು, ಲೇವಾದೇವಿಗಾರರು ತಾವು ಕೊಟ್ಟ ಸಾಲವನ್ನು ವಸೂಲು ಮಾಡಲು ಬಳಸುವ ತಂತ್ರಗಳಲ್ಲಿ ಒಂದು ದೇಹದಾಂಡಿಗರನ್ನು ಸಾಲಗಾರರ ಮೇಲೆ ಛೂ ಬಿಡುವುದು–ಹಿಂದಿನ ದಿನಗಳ ಪಠಾಣರ ಹಾಗೆ ಹೆದರಿಸಿ, ಬೆದರಿಸಿ ಸಾಲ ವಸೂಲು ಮಾಡುವವರೇ ಆಗಿದ್ದಾರೆ. ಇವರನ್ನು ಗೂಂಡಾ ನಕ್ಷತ್ರಿಕರು ಎಂದು ಹೆಸರಿಸಿದರೆ ತಪ್ಪೇನಿಲ್ಲವಲ್ಲ? ಈ ನಕ್ಷತ್ರಿಕರ ಪ್ರಸಂಗ ಬಂದಾಗ ನನ್ನೊಂದು ಅನುಭವವನ್ನೂ ತಮ್ಮ ಮುಂದೆ ತೋಡಿಕೊಂಡರೆ ಮನಸ್ಸಿಗೆ ಕೊಂಚ ಸಮಾಧಾನವಾಗಬಹುದು ಎಂದು ಭಾವಿಸಿ ಹೇಳುತ್ತಿದ್ದೇನೆ.

ಈಗ್ಗೆ ಕೆಲವು ವರ್ಷಗಳ ಹಿಂದೆ ಮೈಸೂರಿನ ಬಡಾವಣೆಯೊಂದರಲ್ಲಿ ಪುಟ್ಟ ಅಂಗಡಿಯೊಂದನ್ನು ಇಟ್ಟುಕೊಂಡಿದ್ದೆ. ವ್ಯಾಪಾರ ಕಮ್ಮಿಯಿತ್ತು. ಯಾಕೆಂದರೆ, ತೊಡಗಿಸಿದ ಬಂಡವಾಳ ಕಮ್ಮಿಯಿತ್ತು. ಆದರೆ, ಇರುವುದರಲ್ಲೇ ಹೊಂದಿಕೊಂಡು ಹೋಗುವುದು ನನ್ನ ಜಾಯಮಾನ ಎಂಬುದು ನಿಮಗೆ ತಕ್ಕಮಟ್ಟಿಗಾದರೂ ಗೊತ್ತಿದೆಯಲ್ಲ? ಆದರೂ ಒಮ್ಮೆ ಸಾಲ ಮಾಡಬೇಕಾಯಿತು, ನೋಡಿ. ನನ್ನ 'ಆಪ್ತ ಗೆಳೆಯ' ಅಂತ ನಾನು ಬಹುಕಾಲದಿಂದಲೂ ಅಂದುಕೊಂಡಿದ್ದವನ ಹತ್ತಿರ ಒಮ್ಮೆ ನೂರು ರೂಪಾಯಿ ಸಾಲ ಪಡೆದೆ. 'ಆಮೇಲೆ ಕೊಡ್ತೀನಿ' ಅಂತಲೂ ಹೇಳಿದ್ದೆ. ಆತ ಒಳ್ಳೆಯ ಸಂಬಳದಾರನಾದುದರಿಂದ, 'ಪರ್ವಾಗಿಲ್ಲ, ನಿಧಾನವಾಗಿ ಕೊಡು' ಅಂತ ಹೇಳಿದ. ನನ್ನ ದಡ್ಡತನದಲ್ಲಿ ಗೆಳೆಯ ಹಣ ಕೇಳದೆಯೂ ಹೋಗಬಹುದು ಅಂದುಕೊಂಡಿದ್ದೆ. ಈ ಬಗೆಯ ದಡ್ಡತನಗಳು ನನ್ನ ಜೀವನದಲ್ಲಿ ಆಗಿಂದಾಗೆ ಘಟಿಸುತ್ತಲೇ ಇವೆ ಅನ್ನಿ. ಆದರೂ ಇನ್ನೆರಡು ತಿಂಗಳುಗಳಲ್ಲಿ ಆ ಹಣವನ್ನು ವಾಪಸ್ಸು ನೀಡಬೇಕೆಂದು ಮನಸ್ಸು ಮಾಡಿಕೊಂಡಿದ್ದೆ. ಹೀಗಿರುವಾಗ, ಸಾಲ ಪಡೆದು ಹದಿನೈದು ದಿನ ಆಗುವುದರೊಳಗೆ ಒಂದು ದಿನ ಸಂಜೆ ನನ್ನ 'ಆಪ್ತ ಗೆಳೆಯ' ಬಡಕಲು ಅಂಗಡಿಯ ಬಳಿಗೆ ಸ್ಕೂಟರ್ ಹಾಕಿಕೊಂಡು ಬಂದು, 'ನನಗೆ ಅರ್ಜೆಂಟ್ ದುಡ್ಡು ಬೇಕಿದೆ, ನೂರು ರೂಪಾಯಿ ವಾಪಸ್ಸು ಕೊಡು' ಅಂತ ಕೇಳಿದ. ಅವನ ಮಾತಿಗೆ ಬೆಕ್ಕಸ ಬೆರಗಾದ ನಾನು, 'ಈಗಿಲ್ಲ. ಇನ್ನೊಂದು ವಾರ ಬಿಟ್ಕೊಂಡು ಕೊಡ್ತೀನಿ' ಅಂದೆ. ನನ್ನ ಮಾತಿಗೆ ಮುಖ ಗಂಟಿಕ್ಕಿಕೊಂಡು ಅವನು, 'ಅದಾಗೊಲ್ಲ, ಈಗ್ಲೆ ಬೇಕು' ಅಂತ ಬಿಗುವಾಗಿ ಹೇಳಿದಾಗ, ನಾನು ಕಕ್ಕಾಬಿಕ್ಕಿಯಾದೆ.

ಪೀಕಲಾಟಕ್ಕಿಟ್ಟುಕೊಂಡಿತು. ಬೇರೇನೂ ತೋಚದೆ ಅಂಗಡಿಗೆ ಸಾಮಾನು ತರಬೇಕೆಂದು ಇರಿಸಿಕೊಂಡಿದ್ದ ನೂರು ರೂಪಾಯಿ ನೋಟನ್ನು ತೆಗೆದು, 'ಇದು ಅಂಗಡಿಗೆ ಸಾಮಾನು ತರಲು ಇರಿಸಿಕೊಂಡಿರುವ ದುಡ್ಡು, ಇದು ಬಿಟ್ಟು ಬೇರೆ ದುಡ್ಡಿಲ್ಲ' ಅಂತ ಪ್ರಾಮಾಣಿಕವಾಗಿ ಹೇಳಿದೆ. ಅವನು ಆ ಕೂಡಲೆ ನೋಟನ್ನು ಈಸಿದುಕೊಂಡು ಅಲ್ಲ ಕಸಿದುಕೊಂಡು, 'ಬೇರೆ ಏನಾದ್ರು ವ್ಯವಸ್ಥೆ ಮಾಡ್ಕೊ' ಅಂತ ಹೇಳಿ, ಸ್ಕೂಟರ್ ಸ್ಟಾರ್ಟ್ ಮಾಡಿಕೊಂಡು ಹೊರಟೇಬಿಟ್ಟ. ಪರಿಣಾಮ, ಆ ದುಡ್ಡು ಹೊಂದಿಸಲು ನಾನು ಒಂದು ವಾರ ಬೆಳಗಿನ ತಿಂಡಿ ಬಿಡಬೇಕಾಯಿತು. ನನಗಿಂತಲೂ ಘೋರವಾದ, ಕ್ರೂರವಾದ ಮತ್ತು ಪ್ರಾಣಾಂತಕವಾದ ಸಾಲದ ಅನುಭವಗಳು ಬೇರೆಯವರಿಗೆ ಆಗಿದೆ ಅನ್ನಿ. ಏನು ಮಾಡುವುದು ಸಾಲ ಪ್ರಪಂಚವೇ ಹಾಗಿದೆ.

ಈ ಸಾಲದ ಪ್ರಶ್ನೆ ಬಂದಾಗ ನಮ್ಮ ಸಂಚಾರಿ ಜ್ಞಾನಿ ಸರ್ವಜ್ಞನ ನೆನಪಾಗದೆ ಇಲ್ಲ. ಅವನು ಕೂಡ ಸಾಲದ ಬಗ್ಗೆ ಬಹು ಸೂಕ್ಷ್ಮವಾಗಿ ತನ್ನೊಂದು ತ್ರಿಪದಿಯಲ್ಲಿ ಹೇಳಿದ್ದಾನೆ. ಸಾಲ ಮಾಡುವಾಗ ಹಾಲೋಗರವನ್ನು ಉಂಡಂತಾಗುವ ಮನುಷ್ಯ, 'ಸಾಲಿಗನು ಬಂದು ಎಳೆವಾಗ ಕಿಬ್ಬದಿಯ ಕೀಲು ಮುರಿದಂತೆ' ಸಂಕಟಕ್ಕೀಡಾಗುವನು ಎಂದು ಹೇಳಿದ್ದಾನೆ. ಆಜನ್ಮ ಬ್ರಹ್ಮಚಾರಿ, ಅಲೆಮಾರಿಯಾದ ಅವನಿಗೆ ಸಾಲವಾದರೂ ಏಕೆ ಬೇಕಿತ್ತು? ಪಕ್ಕಾ ಲಂಗೋಟಿಧಾರಿಯಾದ ಅವನಿಗೆ ಸಾಲವನ್ನು ಯಾರು